

ಗಾಲಿಕುರ್ಚಿಯಲ್ಲೇ ಸಂಭ್ರಮಿಸಿದ ಪ್ರತೀಕಾ ರಾವಲ್

## ಆಸ್ಟ್ರೇಲಿಯಾ ವಿರುದ್ಧ ಸೆಮಿಫೈನಲ್‌ನಲ್ಲಿ ಜೆಮಿಮಾ ಗಳಿಸಿದ ಶತಕ

ಮಹಿಳೆಯರ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 'ಮರೆಯಲಾಗದ ಚೇಸ್' ಈ ಬಾರಿಯ ವಿಶ್ವಕಪ್ ಸೆಮಿಫೈನಲ್ ಪಂದ್ಯದ್ದು. ಬ್ಯಾಟಿಂಗ್‌ಗೆ ತೆರಳಬೇಕಾದ ಕೆಲವೇ ನಿಮಿಷಗಳ ಮೊದಲು ತಮಗೆ ಆಡುವ ಕ್ರಮಾಂಕದಲ್ಲಿ ಬಡ್ತಿ ನೀಡಲಾಗಿದೆ ಎಂಬ ವಿಷಯ ಜೆಮಿಮಾ ರಾಡ್ರಿಗಸ್ ಅವರಿಗೆ ತಿಳಿಯಿತು. ತಂಡದೊಳಕ್ಕೆ ಬರುವುದು, ಹೊರಗುಳಿಯುವುದು ಎರಡೂ ಅನುಭವಗಳನ್ನು ಉಂಡಿದ್ದ ಜೆಮಿಮಾ ಆತಂಕದಲ್ಲಿದ್ದರು. ತಂಡಕ್ಕೆ ತಾವಿನ್ನು ಅನಿವಾರ್ಯವಲ್ಲ ಎನ್ನುವ ಸಂದೇಶ ಅವರಿಗೆ ಸೂಜಿಮೊನೆಯಂತೆ ಚುಚ್ಚುತ್ತಿತ್ತು. ಹೀಗಾಗಿ ಟೂರ್ನಿಯುದ್ದಕ್ಕೂ ಅವರು ಅಳದ ದಿನವೇ ಇರಲಿಲ್ಲ.

ನ್ಯೂಜಿಲೆಂಡ್ ವಿರುದ್ಧ ಗೆಲ್ಲಲೇಬೇಕಾದ ಪ್ರಮುಖ ಪಂದ್ಯದಲ್ಲಿ ಅರ್ಧಶತಕದ ಕಾಣಿಕೆ ನೀಡಿ ತಮ್ಮ ಕೌಶಲವನ್ನು ಸಾಣೆಗೆ ಒಡ್ಡಿಕೊಂಡಿದ್ದ ಈ ಸಂಗೀತಪ್ರಿಯೆ ಆಟದಲ್ಲೂ ಅದ್ಭುತ ಲಯ ತೋರಿದರು. ಮೊದಲ ಎರಡು ವಿಕೆಟ್‌ಗಳು ಬೇಗ ಉರುಳಿದ್ದವು. ಆ ಹಂತದಲ್ಲಿ ಕಂಗಾಲಾಗದೆ ನಾಯಕಿ ಹರ್ಮನ್‌ಪ್ರೀತ್ ಕೌರ್ ಜೊತೆಗೂಡಿ ನಿಧನಿಧಾನವಾಗಿ ಇನಿಂಗ್ಸ್ ಕಟ್ಟಿದರು. ಒಂದೊಂದು ರನ್ ಕದಿಯಲು ಹಿಂದೇಟು ಹಾಕಲಿಲ್ಲ. ಸ್ವೀಪ್, ಡ್ರೈವ್, ಸ್ಲೀಪ್, ಪುಲ್ ಎಲ್ಲ ಹೊಡೆತಗಳ ಪ್ರಯೋಗಗಳಿಗೂ ಎದೆಗೊಟ್ಟರು. ಕೊನೆಯಲ್ಲಿ ಇನ್ನಿಲ್ಲದಂತೆ ದಣಿವು ಕಾಡುತ್ತಾ ಕಣ್ಣು ಕತ್ತಲೆಗಟ್ಟುತ್ತಿದ್ದರೂ ಧೃತಿಗೆಡದೆ 127 ರನ್‌ಗಳನ್ನು ಕಲೆಹಾಕಿ, ಔಟಾಗದೇ ಉಳಿದರು. ಹರ್ಮನ್ ಜೊತೆ ಅವರು ಕಟ್ಟಿದ 167 ರನ್‌ಗಳ ಇನಿಂಗ್ಸ್ ಚಿರ ನೆನಪಾಗಿ ಉಳಿಯಲಿದೆ. ಆ ಇನಿಂಗ್ಸ್ ನಂತರ ಜೆಮಿಮಾ ಸಾಮಾಜಿಕ ಮಾಧ್ಯಮದಲ್ಲಿ ಭಾರತೀಯರ ಕಣ್ಮಣಿಯಾಗಿಬಿಟ್ಟಿದ್ದಾರೆ.

ಫೈನಲ್ ಪಂದ್ಯದಲ್ಲಿ ತಾಳ್ಮೆಯ 24 ರನ್ ಗಳಿಸಿದ ಅವರು ಫೀಲ್ಡಿಂಗ್‌ನಲ್ಲಿ ಎಂದಿನಂತೆ ಪಾದರಸದಂತೆ ಇದ್ದರು.



## ಅಮನ್ಜೋತ್ ತಡಬಡಾಯಿಸಿ ಹಿಡಿದ ಕ್ಯಾಚ್

ಫೈನಲ್ ಪಂದ್ಯದ 42ನೇ ಓವರ್. ದಕ್ಷಿಣ ಆಫ್ರಿಕಾಕ್ಕೆ ಗೆಲ್ಲಲು ಇನ್ನೂ 78 ರನ್‌ಗಳು ಬೇಕಿದ್ದವು. ದೀಪ್ತಿ ಶರ್ಮಾ ಫ್ಲೈಟ್ ಮಾಡಿ ಎಸೆತವೊಂದನ್ನು ಹಾಕಿದರು. ವೋಲ್ವಾರ್ಟ್ ಎಂದಿನ ಆತ್ಮವಿಶ್ವಾಸದಲ್ಲಿ ಅದನ್ನು ಮೇಲಕ್ಕೆ ಹೊಡೆದರು. ಲಾಂಗ್‌ಆನ್‌ನಲ್ಲಿ ಸಾಕಷ್ಟು ದೂರದವರೆಗೆ ಓಡೋಡಿ ಬಂದ ಹುಡುಗಿ ಅಮನ್ಜೋತ್; ಬಡಗಿಯೊಬ್ಬರ ಮಗಳು. ಓಡಿಬಂದ ವೇಗಕ್ಕೆ ನಿಯಂತ್ರಣ ಹಾಕುವಲ್ಲಿ ಅವರು ತಡಬಡಾಯಿಸಿದಾಗ ಚೆಂಡು ಬೊಗಸೆಯಿಂದ ಜಾರಿತ್ತು. ಅದನ್ನು ಇನ್ನೊಮ್ಮೆ, ಮತ್ತೊಮ್ಮೆ ಹಿಡಿತಕ್ಕೆ ಪಡೆದು ಅಂಗಾತ ಮಲಗಿಬಿಟ್ಟರು. 101 ರನ್‌ಗಳನ್ನು ಚಚ್ಚಿ ಭಾರತದ ಗೆಲುವಿನ ಎದುರು ದೊಡ್ಡ ಗೋಡೆಯಂತೆ ನಿಂತಿದ್ದ ವೋಲ್ವಾರ್ಟ್ ಇನಿಂಗ್ಸ್‌ಗೆ ತೆರೆಬಿತ್ತು. 25 ವರ್ಷದ ಅಮನ್ಜೋತ್ ಇದೊಂದು ಕ್ಯಾಚ್‌ನ ಕಾರಣಕ್ಕೆ ದೀರ್ಘಾವಧಿ ನೆನಪಿನಲ್ಲಿ ಉಳಿಯುತ್ತಾರೆ.

ಫೈನಲ್ ಪಂದ್ಯದ ಹತ್ತನೇ ಓವರ್‌ನಲ್ಲಿ ಆರಂಭಿಕ ಆಟಗಾರ್ತಿ ಬ್ರಿಟ್ಸ್ ಅವರನ್ನು ರನ್‌ಔಟ್ ಮಾಡಿದ್ದೂ ಅಮನ್ಜೋತ್ ಅವರ ಕರಾರುವಾಕ್ಕಾದ ನೇರ ಎಸೆತ. ಪಂಜಾಬ್‌ನ ಈ ಹುಡುಗಿಯ ಚುರುಕುಮತಿಗೆ ಇವೆರಡು ಕೆಲವು ಉದಾಹರಣೆಗಳಷ್ಟೆ.



ಪ್ರೇಕ್ಷಕರಿಗೆ ಸ್ಮೃತಿ, ಜೆಮಿಮಾ ನಮನ

